ಮಠದ ಬಾಗಿಲನ್ನು ಪ್ರವೇಶಿಸಿರಲಿಲ್ಲ. ತದನಂತರ ಋಗ್ವೇದಿ ಪಿಎಚ್.ಡಿ. ಮಾಡಿ ವೃತ್ತಿಯಲ್ಲಿ ಜನಪ್ರಿಯತೆಯನ್ನು ಗಳಿಸಿದರು. ಮದುವೆಯಾಗಿ ಇಬ್ಬರು ಗಂಡು ಮಕ್ಕಳೂ ಆಗಿ, ಅವರೂ ಚನ್ನಾಗಿ ಓದಿ ಜೀವನದಲ್ಲಿ ಸೆಟ್ಲಾಗಿಯೂ ಬಿಟ್ಟಿದ್ದರು. ಎಲ್ಲಾ ಸಂಗತಿಗಳೂ ಮೊನ್ನೆ ಮೊನ್ನೆ ನಡೆದವೇನೋ ಅನ್ನಿಸುತ್ತಿತ್ತು ಋಗ್ವೇದಿಯವರಿಗೆ.

ಸದ್ಯಕ್ಕೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಉನ್ನತ ಮಟ್ಟದಲ್ಲಿರುವ ಋಗ್ವೇದಿಯವರಿಗೆ ತಮಗೆ ಅರಿವಿಲ್ಲದೆಯೇ ಯಾವುದೋ ಬಲವಾದ ಕೊರತೆ ಕಾಡುತ್ತಿದೆಯೆಂದೆನಿಸುತ್ತಿತ್ತು. ಹಾಗೆ ಅನ್ನಿಸಿದಾಗಲೆಲ್ಲ ಅವರು ಯೂನಿವರ್ಸಿಟಿಯಲ್ಲಿ ಸೈಕಾಲಜಿ ಡಿಪಾರ್ಟ್‌ಮೆಂಟಿನಲ್ಲಿ ತಮ್ಮ ಜೊತೆಯಲ್ಲಿ ಸುಮಾರು ವರ್ಷಗಳ ಕಾಲ ಕೆಲಸ ಮಾಡಿದ್ದ ಪ್ರೊಫೆಸರ್ ನಾಗರಾಜ ಮೂರ್ತಿಯವರ ಹತ್ತಿರ ಹೋಗುತ್ತಿದ್ದರು. ನಾಗರಾಜ ಮೂರ್ತಿ ನಿವೃತ್ತರಾದ ಮೇಲೆ ಕಾಲ ಕಳೆಯಲೆಂದು ಒಂದು ಕೌನ್ಸೆಲಿಂಗ್ ಸೆಂಟರ್ ಇಟ್ಟುಕೊಂಡಿರುವರಲ್ಲದೆ ಒಳ್ಳೆಯ ಸಂಪಾದನೆಯನ್ನೂ ಮಾಡುತ್ತಿದ್ದಾರೆ. ದಿನಕ್ಕೆ ನಾಲ್ಕು ಜನರಿಗೆ ಮಾತ್ರ ಅಪಾಯಿಂಟ್‌ಮೆಂಟ್ ನೀಡುವ ನಾಗರಾಜ ಮೂರ್ತಿ ಒಂದು ಕೌನ್ಸೆಲಿಂಗ್‌ಗೆ ಎರಡೂವರೆ ಸಾವಿರ ಚಾರ್ಜ್ ಮಾಡುತ್ತಾರೆ. ಎರಡು ವರ್ಷಗಳ ಹಿಂದೆ ಮೊದಲ ಬಾರಿಗೆ ನಾಗರಾಜ ಮೂರ್ತಿಯವರನ್ನು ನೋಡಲು ಹೋದಾಗ ಮೂರ್ತಿಗಳು ಬಿಡುವಾಗಿದ್ದರು. ಋಗ್ವೇದಿಯವರನ್ನು ನೋಡಿ ತುಂಬಾ ಖುಷಿಪಟ್ಟರಲ್ಲದೆ ತಾವು ಬಹಳ ವರ್ಷಗಳಿಂದಲೂ ಮೆಂಬರ್ ಆಗಿರುವ ಮಲ್ಲೇಶ್ವರಂ ಕ್ಲಬ್‌ಗೆ ಕರೆದುಕೊಂಡು ಹೋಗಿದ್ದರು. ಒಂದು ಪಿಕ್ಚರ್ ಡ್ರಾಟ್ ಬಿಯರ್ ಜೊತೆಗೆ ಮಿಕ್ಸೆಡ್ ವೆಜಿಟಬಲ್ ವಡೆ ಮತ್ತು ಫಿಶ್ ಫ್ರೈ ಹೇಳಿದ್ದರು. ಒಂದು ಗ್ಲಾಸ್ ಬಿಯರ್ ಕುಡಿದ ಋಗ್ವೇದಿಯವರು, "ಮೂರ್ತಿ ಒಂದು ಮಾತು ಹೇಳಿದ್ರೆ ನೀನು ಆಶ್ಚರ್ಯ ಪಡಬಹುದು, ನನಗೆ ಮೊದಲಿನಿಂದಲೂ ಭೂಮಿ ತಿರುಗುತ್ತಿದೆ ಎಂಬ ಸಂಗತಿಯನ್ನು ನಂಬಲಾಗುತ್ತಿಲ್ಲ. ಏಕಿರಬಹುದು?" ಎಂದಿದ್ದರು. ನಾಗರಾಜ ಮೂರ್ತಿಯವರು ಬಿಯರ್ ಗ್ಲಾಸ್ ಖಾಲಿ ಮಾಡಿ, "ಮೈಗಾಡ್, ಏನಯ್ಯಾ ನೀನು ಮಾತನಾಡ್ತ ಇರೋದು. ಮೂವತ್ತೈದು ವರ್ಷ ಯೂನಿವರ್ಸಿಟಿಲಿ ಕೆಮಿಸ್ಟ್ರಿ ಪಾಠ ಮಾಡಿ ಸೈನ್ಸ್ ಓದಿರದ ಸೈಕಾಲಜಿ ಪ್ರೊಫೆಸರನ್ನ ಎಂಥ ಪ್ರಶ್ನೆ ಕೇಳ್ತೀಯಾ? ಏನು ತಮಾಷೆ ಮಾಡ್ತ ಇದ್ದೀಯೋ ಇಲ್ಲ ಒಂದು ಗ್ಲಾಸ್ ಬಿಯರಿಗೇನೆ ಚಿತ್ತಾಗಿದ್ದೀಯೋ." ಎಂದು ನಗುತ್ತಾ ತಾವೇ ಗ್ಲಾಸುಗಳಿಗೆ ಬಿಯರ್ ತುಂಬಿದ್ದರು. "ಐಯಾಮ್ ಲಿಟರರಿಲಿ ಸೀರಿಯಸ್ ಮೂರ್ತಿ, ಬಹಳ ವರ್ಷಗಳಿಂದಲೂ ಈ ವಿಷಯ ಕೊರಿತಾ ಇದೆ." ಎಂದಿದ್ದರು ಗಂಭೀರವಾಗಿಯೇ ಋಗ್ವೇದಿ. ನಾಗರಾಜ ಮೂರ್ತಿಯವರಿಗೆ ಸಮ್‌ಥಿಂಗ್ ರಾಂಗ್ ಅನ್ನಿಸದೆ ಇರಲಿಲ್ಲ. "ಋಗ್ವೇದಿ ನಿನಗೆ ಹಾಗೆ ಅನ್ನಿಸಲು ನಿನ್ನ ಹೆಸರು ಕಾರಣವಿರಬಹುದೇನೋ ಅನ್ನಿಸುತ್ತಿದೆ ನನಗೆ. ನಮ್ಮ ಪುರಾತನರು ಕೂಡಾ ಹಾಗೆಯೇ ನಂಬಿದ್ದರು, ಸೂರ್ಯ, ಚಂದ್ರ, ನಕ್ಷತ್ರಗಳು ಪ್ರತಿದಿನ ಹುಟ್ಟಿ ಮರೆಯಾಗುತ್ತವೆ ಎಂದು. ಭೂಮಿ ತಿರುಗುತ್ತಿದೆಯೋ ಇಲ್ಲ ಸೂರ್ಯ ತಿರುಗುತ್ತಿರುತ್ತಾನೋ ನಮಗೆ ಅಪ್ರಸ್ತುತ. ಸೃಷ್ಟಿ, ಪ್ರತಿಸೃಷ್ಟಿ ನಡೆಯುತ್ತಿರುವ ಪುಣ್ಯಗ್ರಹದಲ್ಲಿ ನಾವು ಬದುಕಿದ್ದೀವಲ್ಲ ಎಂಬುದೇ ಬಹು ಮುಖ್ಯವಾದ ಸಂಗತಿ. ನೋಡು, ನೀನು ಕೆಮಿಸ್ಟ್ರಿ ಪ್ರೊಫೆಸರ್. ನೀರು ಆಮ್ಲಜನಕ ಮತ್ತು ಜಲಜನಕಗಳ ಸಂಯೋಜನೆಯಿಂದ ರೂಪುಗೊಂಡಿದೆ ಎಂದು ಹೇಳುತ್ತೀಯ. ಆದರೆ, ಆಮ್ಲಜನಕ, ಜಲಜನಕಗಳು ನಮ್ಮ ಕಣ್ಣಿಗೆ ಬೀಳುವುದಿಲ್ಲ. ಅದೇನು ದೊಡ್ಡ ಸಂಗತಿಯಲ್ಲ. ದೊಡ್ಡ ಸಂಗತಿಯೆಂದರೆ ನಾವು ಬದುಕಲು ಅಗತ್ಯವಾಗಿ ನೀರು ಬೇಕೆ ಬೇಕೆಂಬುದು ಮಾತ್ರ. ನಾವು ಕುಡಿಯುತ್ತಿರುವ ಈ ಬಿಯರ್ ಯಾವುದರಿಂದ ಮಾಡಲಾಗಿದೆಯೋ ಏನೋ. ಅದರಿಂದ ನಮಗೆ ತೃಪ್ತಿ ಮತ್ತು ಮಜಾ ಸಿಗುತ್ತಿರುವುದು ಮಾತ್ರವಷ್ಟೆ ಮುಖ್ಯ. ನಾಳೆ, ನಾಡಿದ್ದು ಬಾ. ಮಾತ್ರೆಯೊಂದನ್ನು ಕೊಡ್ತೀನಿ. ಪ್ರತಿದಿನ ರಾತ್ರಿ ಒಂದೊಂದು ನುಂಗಿ ಮಲಗು, ಮತ್ತೆ ಅಂಥ ಗುಮಾನಿ ಹುಟ್ಟೋದಿಲ್ಲ" ಎಂದಿದ್ದರು. ಮತ್ತು